
ಇದರ ಮೇಲಷ್ಟು ಪಾಂಡ್ಸ್ ಪೌಡರನು
ಸುರಿದುಕೊಂಡರೆ ಸಾಕು, ಏನು ಮಜ ಕಮಲ!
ಒಂದೇ ನಿಮಿಷ ಕಣೆ. ಈ ಒದ್ದೆಲಂಗವ ಬಿಚ್ಚಿ
ಒಗೆದ ಲಂಗವ ತೊಟ್ಟು ಬಂದುಬಿಡುವೆ. ಬಾರೇ
ಇಲ್ಲಿ, ಹುಡುಗರ ಹಾಗೆ ನಾಚುತ್ತಾಳೆ! ತುಂಬ
ಬಿಗಿಯಮ್ಮ ಬ್ರಾ. ಸ್ವಲ್ಪ ಎಳೆದುಕೋ ಹಿಂದೆ
ಹುಕ್ಕನ್ನು ಸಿಗಿಸು. ಎಷ್ಟಿದ್ದರೂ ಇಲಾಸ್ಟಿಕ್ಕು
ಸಾಲದು ಕಣೆ. ಛೀ ಕಳ್ಳಿ, ಕಚಗುಳಿಯನಿಡುತ್ತೀಯ?
ಥೂ ಹೋಗೇ, ಪೋಲಿ ಕಣೆ ನೀನು.



ಬೀಚಿ

ಈ ಆರುಗಜ ಸೀರೆ ಇಷ್ಟು ತೆಳುವಾದದ್ದು
ಒಳಗೆ ಲಂಗವಿದ್ದರೂ ಕೂಡ ಇಲ್ಲವೆನ್ನಿಸಿ
ನನಗೆ, ಒಮ್ಮೊಮ್ಮೆ ಬೀದಿಯಲ್ಲೇ ನಾಚಿ
ಮೊಗ್ಗಾಗಿ ಹೋಗುತ್ತೇನೆ. ಅಲ್ಲವೇ ಕಮಲ
ಏನು ಎಕ್ಸ್‌ರೇ ಕಣ್ಣುಗಳೆ ಹುಡುಗರದ್ದು!
ಆ ಬ್ಲೌಸು ಕೊಡು ಇಲ್ಲಿ. ಹೆರಳು ಹಾಕುತ್ತೀಯ?
ಇವತ್ತು ಮಧ್ಯಾಹ್ನ ಮ್ಯಾಟನಿಗೆ ಬರುತ್ತೀಯ?
ಥೂ ಹೋಗೇ, ಪೋಲಿ ಕಣೆ ನೀನು.

ನಮ್ಮಲ್ಲಿ ಪ್ರಗತಿಶೀಲರ ಕಾಲದವರೆಗೂ ಚಾಲ್ತಿಯಲ್ಲಿದ್ದ ಕಾವ್ಯನಾಮವಿಟ್ಟುಕೊಳ್ಳುವ ಪರಿಪಾಟ ನವ್ಯರ ಕಾಲದಲ್ಲೇಕೆ ಮುಂದುವರಿಯಲಿಲ್ಲ? ಈ ಪ್ರಶ್ನೆಗೆ ಹಿಂದೊಮ್ಮೆ ಸುಮತೀಂದ್ರ ನಾಡಿಗರು ಕೊಟ್ಟ ಉತ್ತರ: ಯಾಕೆಂದರೆ, ನವ್ಯರಿಗೆ ಯಾವ ಮುಚ್ಚುಮರೆಯೂ ಇರಲಿಲ್ಲ. ಹೀಗೆಂದಾಗ ಕಾವ್ಯನಾಮ ಇಟ್ಟುಕೊಂಡವರೆಲ್ಲರಲ್ಲೂ ಮುಚ್ಚುಮರೆಯಿತ್ತೆ ಎಂಬ, ಉತ್ತರಿಸಲು ಸುಲಭವಲ್ಲದ ಪ್ರಶ್ನೆ ಏಳುತ್ತದೆಯಲ್ಲವೆ? ಸದ್ಯಕ್ಕೆ, ನವೋದಯದವರಿಗಿದ್ದ ಸಮಸ್ಯೆಗಳು ನವ್ಯರಿಗಿರಲಿಲ್ಲ, ಆದ್ದರಿಂದಲೇ ಅವರಿಗೆ ಕಾವ್ಯನಾಮಗಳು ಬೇಕಾಗಲಿಲ್ಲ ಎಂದು ಸಮಾಧಾನಪಟ್ಟುಕೊಳ್ಳೋಣ. ಆದರೆ ಯಾವುದೇ ಕಾವ್ಯನಾಮದ ಆಸರೆಯಿಲ್ಲದೆ ಬರೆಯುವವರ ವಿಚಾರವೇನು? ಅವರಲ್ಲಿ ಕೆಲವರು ತಮ್ಮ ನಿಜ ನಾಮಧೇಯದಿಂದಲೇ ಬೇಸ್ತುಬಿದ್ದ ಅಥವಾ ಆತಂಕಕ್ಕೊಳಗಾದ ಸಂದರ್ಭಗಳೂ ಉಂಟಲ್ಲ. ನಿದರ್ಶನಗಳು ಬೇಕೆ?

ಕವಿ, ಕತೆಗಾರ ನಾಗರಾಜ ವಸ್ತಾರೆಯವರ ಅವನು ನನಗೂ ಹೆಚ್ಚು 'ನಾನು' ಎನ್ನುವ ಲಲಿತ ಪ್ರಬಂಧವೊಂದಿದೆ. ಅದರಲ್ಲಿರುವ ಒಂದು ಪ್ರಸಂಗ: ಈ ವಸ್ತಾರೆ ಅಂತನ್ನುವ ಚಿಕ್ಕ ಗ್ರಾಮದಲ್ಲಿ ನನ್ನ ಪೂರ್ವಿಕರು ಯಾರೋ ಇದ್ದರಂತೆ; ಅದರ ಪಳೆಯುಳಿಕೆಯೆಂಬಂತೆ ನನ್ನ ಹೆಸರಿನಲ್ಲೂ ಸೇರಿಕೊಂಡಿದೆ